RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ Volume 148	ಬೆಂಗಳೂರು, ಗುರುವಾರ, ಆಗಸ್ಟ್ ೧೫, ೨೦೧೩ (ಶ್ರಾವಣ ೨೪, ಶಕ ವರ್ಷ ೧೯೩೫) Bangalore, Thursday, August 15, 2013 (Shravana 24, Shaka Varsha 1935)	ಸಂಚಿಕೆ ೩೩ Issue 33

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ವಿಷಯ : ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿಗಳಿಗೆ ನೀಡಲಾಗುವ ಆಹಾರಧಾನ್ಯ ಪ್ರಮಾಣದಲ್ಲಿ ಅಕ್ಕಿಯೊಂದಿಗೆ ಗೋಧಿಯನ್ನು ಖರೀದಿಸಲು ಸ್ವಇಚ್ಛೆಯಿಂದ ಬಯಸುವ ನಗರ/ಪಟ್ಟಣ ಪ್ರದೇಶದ ಬಿಪಿಎಲ್ ಪಡಿತರ ಚೀಟಿದಾರರಿಗೆ ಗೋಧಿಯನ್ನು ಪ್ರತಿ ಕಿಲೋಗೆ ರೂ. 3.00 ರಿಂದ ರೂ. 1.00 ಕ್ಕೆ ಇಳಿಸಿದ ದರದಲ್ಲಿ ನಿಗಧಿತ ಪ್ರಮಾಣದಲ್ಲಿ ಜುಲೈ 2013ರ ಮಾಹೆಯಿಂದ ನೀಡುವ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ : ಆನಾಸ 43 ಡಿಆರ್ಎ 2013, ದಿನಾಂಕ : 15–6–2013.

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರದ ದಿನಾಂಕ : 15–06–2013ರ ಆದೇಶದಲ್ಲಿ ಪ್ರತಿ ಬಿಪಿಎಲ್ ಪಡಿತರ ಚೀಟಿದಾರರ ಕುಟುಂಬಕ್ಕೆ ಕುಟುಂಬದ ಸದಸ್ಯರ ಸಂಖ್ಯೆಯನ್ನು ಆಧರಿಸಿ, ಪ್ರತಿ ಒಂದು ಸದಸ್ಯ ಕುಟುಂಬಕ್ಕೆ 10 ಕಿಲೋ ಅಕ್ಕಿ ಎರಡು ಕುಟುಂಬ ಸದಸ್ಯ ಕುಟುಂಬಕ್ಕೆ 20 ಕಿಲೋ ಮತ್ತು ಮೂರು ಹಾಗೂ ಅದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ ಗರಿಷ್ಠ 30 ಕಿಲೋ ಅಕ್ಕಿಯನ್ನು ಪ್ರತಿ ಕಿಲೋ ಅಕ್ಕಿಗೆ ರೂ. 3.00 ರಿಂದ ರೂ. 1.00 ಕ್ಕೆ ಇಳಿಸಿದ ದರದಲ್ಲಿ ಜುಲೈ 2013ರ ಮಾಹೆಯಿಂದ ನೀಡಲು ಆದೇಶ ಹೊರಡಿಸಲಾಗಿದೆ.

ತಮಗೆ ಅಕ್ಕಿಯೊಂದಿಗೆ ಗೋಧಿಯನ್ನು ಸಹ ನೀಡಬೇಕೆಂದು ನಗರ/ಪಟ್ಟಣ ಪ್ರದೇಶಗಳ ಬಿ.ಪಿ.ಎಲ್. ಪಡಿತರ ಚೀಟಿದಾರರು ಬೇಡಿಕೆ ಸಲ್ಲಿಸಿರುವುದರಿಂದ, ಗೋಧಿಯನ್ನು ಬಳಸುವ ನಗರ/ಪಟ್ಟಣ ಪ್ರದೇಶದ ಬಿ.ಪಿ.ಎಲ್. ಪಡಿತರ ಚೀಟಿದಾರರ ಅನುಕೂಲಕ್ಕಾಗಿ ನಿಗಧಿತ ಪ್ರಮಾಣದಲ್ಲಿ ಅಕ್ಕಿಯೊಂದಿಗೆ ಗೋಧಿಯನ್ನು ನೀಡುವುದು ಸಮಂಜಸವೆಂದು ಕಂಡುಬಂದ ಹಿನ್ನೆಲೆಯಲ್ಲಿ ಸ್ವಯಿಚ್ಛೆಯಿಂದ ಸ್ವೀಕರಿಸಲು ಮುಂದೆ ಬರುವ ಅಂತಹ ಬಿಪಿಎಲ್ ಪಡಿತರ ಚೀಟಿದಾರರಿಗೆ, ನಿಗಧಿತ ಪ್ರಮಾಣದಲ್ಲಿ ಗೋಧಿಯನ್ನು ಪ್ರತಿ 1 ಕಿಲೋಗೆ ರೂ. 3.00 ರಿಂದ ರೂ. 1.00 ಕ್ಕೆ ಇಳಿಸಿದ ದರದಲ್ಲಿ ನೀಡಲು ಹಾಗೂ ಅಂತ್ಯೋದಯ ಅನ್ನ ಯೋಜನೆಯಡಿ ನೀಡುವ ಗೋಧಿಯನ್ನು ಪ್ರತಿ ಕಿಲೋಗೆ ರೂ. 2.00 ರಿಂದ ರೂ. 1.00ಕ್ಕೆ ಇಳಿಸಿದ ದರದಲ್ಲಿ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆನಾಸ 43 ಡಿಆರ್ಎ 2013, ಬೆಂಗಳೂರು, ದಿನಾಂಕ : 24–06–2013.

ಮೇಲೆ ವಿವರಿಸಿರುವಂತೆ, ಸ್ವಇಚ್ಛೆಯಿಂದ ಗೋಧಿಯನ್ನು ಸ್ವೀಕರಿಸಲು ಮುಂದೆ ಬರುವ ನಗರ/ಪಟ್ಟಣ ಪ್ರದೇಶಗಳ ಬಿಪಿಎಲ್ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ನೀಡಲಾಗುವ, ಆಹಾರಧಾನ್ಯದ ಒಟ್ಟು ಪ್ರಮಾಣದಲ್ಲಿ ವ್ಯತ್ಯಾಸವಾಗದಂತೆ ನಗರ/ಪಟ್ಟಣ ಪ್ರದೇಶದ ಪಡಿತರ ಚೀಟಿದಾರರಿಗೆ ಒಂದು ಸದಸ್ಯ ಕುಟುಂಬಕ್ಕೆ ಈಗ ಅರ್ಹರಿರುವ 10 ಕಿಲೋ ಅಕ್ಕಿಯಲ್ಲಿ 5 ಕಿಲೋ ಅಕ್ಕಿಯ ಬದಲಿಗೆ ಗರಿಷ್ಠ 5 ಕಿಲೋ ಗೋಧಿ, ಎರಡು ಸದಸ್ಯ ಕುಟುಂಬಕ್ಕೆ ಈಗ ಅರ್ಹರಿರುವ 20 ಕಿಲೋ ಅಕ್ಕಿಯಲ್ಲಿ, 10 ಕಿಲೋ ಅಕ್ಕಿಯ ಬದಲಿಗೆ ಗರಿಷ್ಠ 10 ಕಿಲೋ ಗೋಧಿ, ಮೂರು ಸದಸ್ಯ ಹಾಗೂ ಹೆಚ್ಚಿನ ಸದಸ್ಯರ ಕುಟುಂಬಕ್ಕೆ ಈಗ ಅರ್ಹರಿರುವ 30 ಕಿಲೋ ಅಕ್ಕಿಯಲ್ಲಿ 10 ಕಿಲೋ ಅಕ್ಕಿಯ ಬದಲಿಗೆ 10 ಕಿಲೋ ಗೋಧಿಯನ್ನು ಪ್ರತಿ ಕಿಲೋಗೆ ರೂ. 3.00 ರಿಂದ ರೂ. 1.00 ಕ್ಕೆ ಇಳಿಸಿದ ದರದಲ್ಲಿ ಗೋಧಿಯ ದಾಸ್ತಾನು ಲಭ್ಯತೆಯನ್ನು ಆಧರಿಸಿ ಜುಲೈ 2013ರ ಮಾಹೆಯಿಂದ ವಿತರಿಸಲು ಆದೇಶಿಸಿದೆ.

ಮುಂದುವರೆದು ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಪ್ರತಿ ಪಡಿತರ ಚೀಟಿಗೆ ನೀಡುತ್ತಿರುವ 6 ಕಿಲೋ ಗೋಧಿಯ ದರವನ್ನು ಸಹ ಜುಲೈ 2013ರ ಮಾಹೆಯಿಂದ ರೂ. 2.00 ರಿಂದ 1.00 ರ ದರಕ್ಕೆ ಇಳಿಸಿದ ದರದಲ್ಲಿ ವಿತರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

P.R. 717

SC - 20

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಭಾರತಿ ಹಿರೇಮಠ್, ಹಿರಿಯ ವೈದ್ಯಾಧಿಕಾರಿ (ಹೋಮೀಯೋಪತಿ) ಆಯುಷ್ ಇಲಾಖೆ, ಇವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ಬಗ್ಗೆ-ಆದೇಶ.

ಓದಲಾಗಿದೆ :

1. ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ : ಪಿಎಸ್‌ಪಿ 23 ಆರ್‌ಟಿಬಿ 89, ದಿನಾಂಕ : 26-04-1990.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಆಕುಕ 232 ಪಿಐಎಂ 90, ದಿನಾಂಕ : 06-12-1990.
3. ಪೊಲೀಸ್ ಉಪ ನಿರೀಕ್ಷಕರು, ನಾಗರೀಕರ ಹಕ್ಕು ಜಾರಿ ನಿರ್ದೇಶನಾಲಯ, ಗುಲ್ಬರ್ಗಾ ಇವರು ಪೊಲೀಸ್ ಇನ್ಸ್‌ಪೆಕ್ಟರ್ ಬ್ರಹ್ಮಪೂರ ಪೊಲೀಸ್ ಠಾಣೆ, ಗುಲ್ಬರ್ಗಾ, ಇವರಿಗೆ ಬರೆದ ಪತ್ರ ಸಂಖ್ಯೆ : ಜಾವಿ-14/ನಾಹಜಾನಿ/ಗುಬ/1999, ದಿನಾಂಕ : 28-07-2009.
4. ತಹಶೀಲ್ದಾರ್ ಗುಲ್ಬರ್ಗಾ ಇವರ ಆದೇಶ ಸಂಖ್ಯೆ : ಕಂ.ಸಂ. 2/246/07-08, ದಿನಾಂಕ : 28-01-2009.
5. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 83003/2009 ರಲ್ಲಿ ದಿನಾಂಕ : 27-03-2013 ರಂದು ನೀಡಿದ ತೀರ್ಪು,
6. ಸಮಾಜ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಸಕಇ 116 ಎಸ್‌ಎಡಿ 2013, ದಿನಾಂಕ: 22-05-2013.

ಪ್ರಸ್ತಾವನೆ :

ಕರ್ನಾಟಕ ಲೋಕಸೇವಾ ಆಯೋಗವು ಶ್ರೀಮತಿ ಭಾರತಿ ಹಿರೇಮಠ್, ಇವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಅಧಿಸೂಚನೆಯಲ್ಲಿ ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆಯ ವೈದ್ಯರು ದರ್ಜೆ-3ರ ಹುದ್ದೆಗೆ ಪರಿಶಿಷ್ಟ ಜಾತಿ ಮೀಸಲಾತಿಯಡಿಯಲ್ಲಿ ಆಯ್ಕೆ ಮಾಡಿತ್ತು. ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ : (2) ರಲ್ಲಿನ ಅಧಿಸೂಚನೆಯಲ್ಲಿ ಶ್ರೀಮತಿ ಭಾರತಿ ಹಿರೇಮಠ್ ಇವರನ್ನು ಭಾರತೀಯ ವೈದ್ಯ ಪದ್ಧತಿ ಇಲಾಖೆಯಲ್ಲಿ ವೈದ್ಯಾಧಿಕಾರಿ ದರ್ಜೆ 3 (ಹೋಮಿಯೋಪತಿ) ಹುದ್ದೆಗೆ ನೇಮಕ ಮಾಡಲಾಗಿತ್ತು.

ಶ್ರೀ ಬಾಬುರಾವ್ ಬಡಿಗೇರ, ಪ್ರಧಾನ ಕಾರ್ಯದರ್ಶಿಗಳು, ಎಸ್.ಸಿ./ಎಸ್.ಟಿ. ನಾಗರೀಕ ಹಕ್ಕುಗಳ ಸಂರಕ್ಷಣಾ ಸಮಿತಿ, ಗುಲ್ಬರ್ಗಾ, ಇವರು ಡಾ॥ ಭಾರತಿ ಹಿರೇಮಠ್, ತಂದೆ ಲಿಂಗಬಸಯ್ಯ ಹಿರೇಮಠ್, ಇವರು ಪರಿಶಿಷ್ಟ ಜಾತಿಯ **"ಬೇಡ ಜಂಗಮ"** ಜಾತಿಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಪರಿಶಿಷ್ಟ ಜಾತಿಯ ಮೀಸಲಾತಿ ಕೋಟಾದಡಿ ಸರ್ಕಾರಿ ಹುದ್ದೆಯ ನೇಮಕಾತಿ ಪಡೆದಿರುವುದಾಗಿ ನೀಡಿದ ದೂರಿನ ಮೇಲೆ ಪೊಲೀಸ್ ಉಪ ನಿರೀಕ್ಷಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಗುಲ್ಬರ್ಗಾ, ಇವರು ವಿವರವಾದ ತನಿಖೆ ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ವರದಿಯಲ್ಲಿ ಡಾ॥ ಭಾರತಿ ಹಿರೇಮಠ್ ತಂದೆ : ಲಿಂಗಬಸಯ್ಯ ಹಿರೇಮಠ್, ಇವರು ಮೂಲತಃ ಲಿಂಗಾಯಿತ ಜಂಗಮ ಜಾತಿಯವರಾಗಿದ್ದು, ಪರಿಶಿಷ್ಟ ಜಾತಿಯ ಬೇಡ ಜಂಗಮ ಜಾತಿಯ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದು ಪರಿಶಿಷ್ಟ ಜಾತಿಯ ಮೀಸಲಾತಿ ಕೋಟಾದಡಿ ಸರ್ಕಾರಿ ನೌಕರಿಗೆ ಆಯ್ಕೆಯಾಗಿರುವುದಾಗಿ ವರದಿ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (4) ರಲ್ಲಿನ ಆದೇಶದಲ್ಲಿ ತಹಶೀಲ್ದಾರ್ ಗುಲ್ಬರ್ಗಾ, ಇವರು ಸೂಪರಿಟೆಂಡೆಂಟ್ ಆಫ್ ಪೊಲೀಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಗುಲ್ಬರ್ಗಾ, ಇವರು ದಿನಾಂಕ : 23-12-2008 ರಂದು ನೀಡಿದ ವರದಿಯನ್ನು ಆಧರಿಸಿ ಡಾ॥ ಭಾರತಿ ಹಿರೇಮಠ್, ಇವರಿಗೆ ದಿನಾಂಕ : 18-04-1990 ರಂದು ನೀಡಲಾಗಿದ್ದ ಬೇಡ ಜಂಗಮ ಜಾತಿಗೆ ಸೇರಿದ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ರದ್ದುಪಡಿಸಿರುತ್ತಾರೆ.

ಡಾ॥ ಭಾರತಿ ಹಿರೇಮಠ್, ಇವರು ಗುಲ್ಬರ್ಗಾ ತಹಶೀಲ್ದಾರರ ದಿನಾಂಕ : 28-01-2009ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಗುಲ್ಬರ್ಗಾ ಸಂಚಾರಿ ಪೀಠದ ಮುಂದೆ 83003/2009 ರ ಸಂಖ್ಯೆಯ ರಿಟ್ ಅರ್ಜಿಯನ್ನು ದಾಖಲಿಸಿ ಪ್ರಶ್ನಿಸಿದ್ದರು. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಗುಲ್ಬರ್ಗಾ ಸಂಚಾರಿ ಪೀಠವು ದಿನಾಂಕ : 27-03-2013 ರಂದು ನೀಡಿದ ಆದೇಶದಲ್ಲಿ ನಾಗರೀಕರ ಹಕ್ಕು ಜಾರಿ ನಿರ್ದೇಶನಾಲಯ ನೀಡಿರುವ ವರದಿಯನ್ನು ಈ ಕೆಳಕಂಡಂತೆ ಉಲ್ಲೇಖಿಸಿ ರಿಟ್ ಅರ್ಜಿಯನ್ನು ವಜಾ ಮಾಡಿರುತ್ತದೆ.

" The report of the Civil Rights Enforcement Cell clearly discloses that the petitioner does not belong to Beda Jangama Community and she does not belongs to Scheduled Caste. In that view of the matter, the petition is liable to be dismissed."

The counsel for the petitioner referred to the decision of this court in W.P.No. 84115/2012, in a similar case, this Court had directed the Caste Verification Committee to verify the caste status of the petitioner therein. However, the relief for quashing the F.I.R. was rejected. In the present case, facts stand on different footing. In the said case, District Caste Verification Committee was constituted by a Circular dated : 06-05-2009, In this case, when the Tahsildar passed an order, which was much before the Circular

dated : 06-05-2009, which constituted Caste Verification Committee, therefore, the Tahsildar was the competent authority to have issued Annexure-B.

Accordingly, writ petition is dismissed."

ಸಮಾಜ ಕಲ್ಯಾಣ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿನ ಅನಧಿಕೃತ ಟಿಪ್ಪಣಿಯಲ್ಲಿ ಡಾ॥ ಭಾರತಿ ಹಿರೇಮಠ್, ವೈದ್ಯರು, ಇವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ನೇಮಕಾತಿ ಹೊಂದಿದ್ದು, ಸದರಿಯವರು ಪಡೆದಿರುವ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ತಹಶೀಲ್ದಾರರು ಈಗಾಗಲೇ ರದ್ದುಪಡಿಸಿರುವುದರಿಂದ ಹಾಗೂ ತಹಶೀಲ್ದಾರರ ಆದೇಶವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ : 27–03–2013ರ ಆದೇಶದಲ್ಲಿ ಎತ್ತಿಹಿಡಿದಿರುವುದರಿಂದ ಡಾ॥ ಭಾರತಿ ಹಿರೇಮಠ್ ಇವರ ನೇಮಕಾತಿಯು ಕಾನೂನು ಬಾಹಿರವಾಗಿರುವುದರಿಂದ ಇವರನ್ನು ಸೇವೆಯಿಂದ ವಜಾಗೊಳಿಸುವಂತೆ ಕೋರಿದೆ.

ಭಾರತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ : 4636/2008ರ ಮಧುಲಿಕ ಗುರುಪ್ರಸಾದ ಧಾಹಿರ್ ಮತ್ತು ಇತರರು ಪ್ರಕರಣದಲ್ಲಿ ದಿನಾಂಕ : 25–07–2008ರಂದು ನೀಡಿರುವ ತೀರ್ಪಿನ ಅನುಸಾರ ಯಾವುದೇ ನೋಟೀಸನ್ನು ನೀಡದೇ ನೇಮಕಾತಿಯನ್ನು ರದ್ದು ಮಾಡತಕ್ಕದ್ದು ಮತ್ತು ಯಾವುದೇ ಹುದ್ದೆಯಲ್ಲಿ ಮುಂದುವರೆಸತಕ್ಕದ್ದಲ್ಲ ಎಂದು ತಿಳಿಸಲಾಗಿದೆ. ಅದರ ಉದ್ಧೃತ ಭಾಗ ಈ ಕೆಳಕಂಡಂತೆ ಇರುತ್ತದೆ.

"………….. as soon as the finding is recorded by the scrutiny committee holding that the certificate obtained was false on its cancellation and confiscation simultaneously, it should be communicated to the educational institution concerned, or the appointing authority with a request to cancel the admission on the appointment thereon, the admission or appointment shall be cancelled without any further notice to the candidate and the candidate shall be debarred from further study or continue in office in a past"

ಡಾ॥ ಭಾರತಿ ಹಿರೇಮಠ್, ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ), ಪ್ರಸ್ತುತ ಗುಲ್ಬರ್ಗಾ ಜಿಲ್ಲಾ ಆಯುಷ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೇವೆಗೆ ನೇಮಕಾತಿ ಹೊಂದಿ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ನಿಯಮ 20ನ್ನು ಉಲ್ಲಂಘಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ವೈದ್ಯರನ್ನು ಸೇವೆಯಿಂದ ವಜಾ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 449 ಪಿಐಎಂ 2013, ಬೆಂಗಳೂರು, ದಿನಾಂಕ : 24–06–2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ॥ ಭಾರತಿ ಹಿರೇಮಠ್, ಹಿರಿಯ ವೈದ್ಯಾಧಿಕಾರಿ (ಹೋಮಿಯೋಪತಿ), ಪ್ರಸ್ತುತ ಗುಲ್ಬರ್ಗಾ ಜಿಲ್ಲಾ ಆಯುಷ್ ಅಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎನ್. ಹರಿಣಿಯಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ ಮತ್ತು ಸಮನ್ವಯ).

P.R. 724

COMMERCE AND INDUSTRIES SECRETARIAT

SUB : Project proposal of M/s Ace Designers Ltd., to establish World Class Machine Tool Industry and State of Art Technology Foundry at Dobbaspet Nelamangala Taluk, Bangalore Rural District-reg.

READ :

1. 7^{th} SLSWCC Meeting held on 21-03-2005.
2. SLSWCC approval dated : 07-04-2005.
3. Proceedings of 29^{th} SHLCC meeting held on 06-09-2012.
4. Request of M/s Ace Designers Ltd., dated : 29-05-2012.

Preamble :

M/s Ace Designers Ltd., proposal to establish a unit for manufacture of "Machine Tools and Establishment of Industrial Complex" at Dobbaspet, Nelamangala Taluk, Bangalore Rural District with an investment of Rs. 46.70 crores was cleared in the 7^{th} SLSWCC meeting read at (1) above, Approval read at (2) above was issued.

Though the project was approved in 2005, the process for acquiring 80 acres of land at Dobbaspet, Nelamangala Taluk, Bangalore Rural District was handed over to the industry on 18-08-2007. But the statutory Pollution Board Clearance-Consent for Establishment was obtained in February 2012. In the meanwhile M/s Ace Designers Ltd., came up with project proposal for establishment of "World class Machine Tool Industry and State of Art Technology-foundry". Thus in their letter dated : 29-05-2012 requested the Government to accord approval to enhance the project cost from Rs. 46.70 crores to Rs. 257.00 crores. As the project cost was above Rs. 50.00 crores, it was placed before the SHLCC. This was discussed in 29^{th} SHLCC and the committee approved the

revised cost of the project (Rs. 257.00 crores) due to change in the project components i.e., the establishment of "World class Machine Tool Industry and State of Art Technology-foundry".

The details of project cost are as below :

Cost of the project	(Rs. In crores)	Means of Finance	(Rs. In crores)
Land & Buillding	35.12	Promoters quality	121.75
Plant & Machinery	218.85	Terms & loans	135.00
Others	2.78		
Total	**256.75**	**Total**	**256.75**

The company has entered into a MoU with Government of Karnataka during GIM 2012 for this project.

The Government has examined the proposal and hence the following Order.

GOVERNMENT ORDER NO. CI 368 SPI 2012, BANGALORE, DATED : 20-06-2013

Government is pleased to approve the proposal of M/s Ace Designers Ltd., to establish World class Machine Tool Industry and State of Art Technology-foundry in Dobbaspet, Nelamangala Taluk, Bangalore Rural District with an investment of Rs. 256.75 crores,generating additional employment to about 882 persons in 80 acres of land acquired by KIADB as SUC with the following infrastructure facilities, incentives and concessions :

Infrastructure facilities :

Land :	80 acres of land, outside the Tippagondanahalli reservoir catchment area in Dobbaspet, Nelamanagala Taluk, Bangalore Rural District already acquired and allotted by KIABD as SUC.
Water :	2,50,000 LPD will be provided by KIADB
Power :	1500 KVA Additional power will be serviced by BESCOM.
Incentives & Concessions :	As per the applicable Industrial Policy of the State.

GENERAL TERMS AND CONDITIONS :

1. **Environment :** The promoters to obtain CFE and CFO from KSPCB and environmental clearance from MOEF, Govt. of India.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka (Dr. Sarojini Mahishi Report). A copy of Human Resources Development plan shall be sent to the Commissioner for Industrial Development & Director of Industries and Commerce for monitoring.
3. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for Industrial Development & Director of Industries and Commerce for monitoring.
4. **Social Infrastructure Development :** The Company is advised to take up social Infrastructure development projects in the vicinity of the proposed location of the unit. A copy of such projects shall be sent to the Commissioner for Industrial Development & Director of Industries and Commerce for monitoring.
5. **Others :**
   a) Promoters shall provide local employment in the project as per the Dr. Sarojini Mahishi report.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including Govt. of India and shall submit milestones/progress in the implementation of the project regularly, which will be monitored by the Department.

This approval is valid for a period of two years from the date of issue of this order.

By Order and in the name of the Governor of Karnataka,

PR. 725

SHIVASHANKAR NAIK. L

Desk Officer (Technical Cell),

Commerce & Industries Department.

COMMERCE AND INDUSTRIES SECRETARIAT

CORRIGENDUM

No: CI 334 SPI 2012, Bangalore, dated: 22nd June, 2013.

SUB : Approval to the project proposal of M/s Sahasralingeshwara Power Pvt. Ltd. To establish “12.5 MW Mini Hydel Project” at Hireebandadi and Nekkiladi Villages, Near Uppinangady Town, Puttur Taluk, Dakshina Kannada District-reg.

REF : Government No. CI 334 SPI 2012, dated : 09-11-2012.

Preamble :

In the order portion of Government Order No. CI 334 SPI 2012, dated : 09-12-2012, under infrastructure facilities, subhead “Land” the following words

“Total 55.53 Acres of Land out of which the company to purchase 46.99 acres of land at Hirebandad Village u/s. 109 of KLR Act and KIADB to acquire and allot the balance 8.54 acres of land as SUC at Nekkiladi Village, Puttur Taluk, Dakshina Kannada District for the project. The promoters to furnish the details of 70% consent obtained from land owners to KIADB”

Shall be replaced by

“Total 55.53 Acres of Land out of which the company to purchase 46.99 acres of land at Hirebandad Village u/s. 109 of KLR Act (which forms 84.62% of total area) and KIADB to acquire and allot the balance 8.54 acres of land as SUC at Nekkiladi Village, Puttur Taluk, Dakshina Kannada District for the project.

By Order and in the name of the Governor of Karnataka,
SHIVASHANKARA NAIK. L
Desk Officer (Technical Cell),
Commerce & Industries Department.

PR. 726

ಶಿಕ್ಷಣ ಸಚಿವಾಲಯ

ವಿಷಯ : 2013–14ನೇ ಸಾಲಿಗೆ ಬಿ.ಎಸ್ಸಿ, ಪದವೀಧರರಿಗೆ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಎ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಪ್ರವೇಶ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ಇಡಿ 106 ಟಿಇಸಿ 2003, ದಿನಾಂಕ : 16–08–2003.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪತ್ರ ಸಂಖ್ಯೆ : ಕೆಇಎ/ಲೀಗಲ್ ಸೆಲ್/ಸಿಆರ್–71/2012–13, ದಿನಾಂಕ : 16–03–2013.
3. 2013–14ನೇ ಸಾಲಿಗೆ ಎಐಸಿಟಿಇ ಹೊರಡಿಸಿರುವ ಮಾರ್ಗಸೂಚಿ/ಕೈಪಿಡಿ.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2003–04ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಡಿಪ್ಲೊಮಾಧಾರಕರುಗಳಿಗೆ ಬಿ.ಇ./ಬಿ.ಟೆಕ್.ನ ಎರಡನೇ ವರ್ಷ/3ನೇ ಸೆಮಿಸ್ಟರ್‌ಗೆ ನೇರ ಪ್ರವೇಶಾತಿಯನ್ನು (ಆರ್ಕಿಟೆಕ್ಚರ್ ಕೋರ್ಸಿಗೆ ಮೊದಲನೆ ಸೆಮಿಸ್ಟರ್‌ಗೆ ಪ್ರವೇಶವನ್ನು) ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಆ ಪರೀಕ್ಷೆಯಲ್ಲಿ ಮತ್ತು ಡಿಪ್ಲೋಮಾ ಅಂತಿಮ ವರ್ಷದ ಪರೀಕ್ಷೆಯಲ್ಲಿ ಪಡೆದ ಅಂಕಗಳು ಇವುಗಳನ್ನು ಸಮ ಪ್ರಮಾಣದಲ್ಲಿ ಪರಿಗಣಿಸಿ ತಯಾರಿಸಿದ ಅರ್ಹತಾ ಪಟ್ಟಿಯಲ್ಲಿನ ರ್‍ಯಾಂಕ್ ಆಧಾರದ ಮೇಲೆ ಸೀಟುಗಳನ್ನು ತತ್ಸಮಾನ ಕೋರ್ಸುಗಳಿಗೆ ಹಂಚಿಕೆ ಮಾಡಬೇಕೆಂದು ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಎಐಸಿಟಿಇಯು 2013–14ನೇ ಸಾಲಿಗೆ ಹೊರಡಿಸಿರುವ ಮಾರ್ಗಸೂಚಿ/ಕೈಪಿಡಿಯಂತೆ ಡಿಪ್ಲೋಮಾ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್ ಪ್ರವೇಶಾತಿಗೆ ಬಿ.ಎಸ್ಸಿ. ಪದವೀಧರರನ್ನೂ ಸಹ ಪರಿಗಣಿಸಬಹುದೆಂದು ತಿಳಿಸಿರುವುದರಿಂದ ಬಿ.ಎಸ್ಸಿ. ಪದವೀಧರರಿಗೂ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶಾತಿ ನೀಡುವ ಕುರಿತು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಎಐಸಿಟಿಇ ಮಾರ್ಗಸೂಚಿ/ಕೈಪಿಡಿಯಲ್ಲಿ ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಎಸ್ಸಿ, ಪದವೀಧರರಿಗೆ ಪ್ರವೇಶ ನೀಡಲು ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.

“B. Passed B.Sc. Degree from a recognized University as defined by UGC, with at least 45% marks (40% in case of candidates belonging to reserved category) and passed XII standard with mathematics as a subject.

C. Provided that in case of students belonging to B.Sc. Stream, shall clear the subjects of Engineering Graphics/Engineering Drawing and Engineering Mechanics of the first year Engineering program along with the second year subjects.

D. Provided further that, the students belonging to B.Sc. Stream shall be considered only after filling the supernumerary seats in this category with students belonging to the Diploma stream."

ಮೇಲಿನ ಅಂಶಗಳಂತೆ ಸರ್ಕಾರವು ಪರಿಶೀಲಿಸಿ ಬಿ.ಎಸ್ಸಿ. ಪದವೀಧರರಿಗೆ ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ನೇರ ಪ್ರವೇಶಾತಿ ನೀಡುವ ಕುರಿತು ಕರ್ನಾಟಕ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಾತಿ ನಿಯಮಗಳು, 2006ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ 2013-14ನೇ ಸಾಲಿಗೆ ಪ್ರವೇಶಾತಿಯನ್ನು ನೀಡಲು ತೀರ್ಮಾನಿಸಲಾಗಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಇಡಿ 67 ಟಿಇಸಿ 2013, ಬೆಂಗಳೂರು, ದಿನಾಂಕ : 11ನೇ ಜೂನ್ 2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2013-14ನೇ ಸಾಲಿಗೆ ಬಿ.ಎಸ್ಸಿ. ಪದವೀಧರರಿಗೂ ಲ್ಯಾಟರಲ್ ಎಂಟ್ರಿ ಮೂಲಕ ಬಿ.ಇ. 2ನೇ ವರ್ಷದ 3ನೇ ಸೆಮಿಸ್ಟರ್‌ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರವೇಶಾತಿ ನೀಡಲು ಕರ್ನಾಟ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಾತಿ ನಿಯಮಗಳು, 2006ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಿದೆ.

(1) ಡಿಪ್ಲೋಮಾಧಾರಕರುಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಪ್ರವೇಶಾತಿಗೆ ನಿಗದಿಪಡಿಸಿರುವ ಶೇ. 20%ರಷ್ಟು ಸೀಟುಗಳನ್ನು ಪ್ರಥಮವಾಗಿ ಡಿಪ್ಲೋಮಾಧಾರಕರುಗಳಿಗೆ ಹಿಂದಿನ ಸಾಲಿನಲ್ಲಿದ್ದಂತೆ ಸಿಇಟಿ ಪರೀಕ್ಷೆ ನಡೆಸಿ ಆ ಪರೀಕ್ಷೆಯಲ್ಲಿ ಮತ್ತು ಡಿಪ್ಲೋಮಾ ಅಂತಿಮ ವರ್ಷದ ಪರೀಕ್ಷೆಯಲ್ಲಿ ಪಡೆದ ಅಂಕಗಳು ಇವುಗಳನ್ನು ಸಮ ಪ್ರಮಾಣದಲ್ಲಿ ಪರಿಗಣಿಸಿ ತಯಾರಿಸಿದ ಅರ್ಹತಾ ಪಟ್ಟಿಯಲ್ಲಿನ ರ್‍ಯಾಂಕ್ ಆಧಾರದ ಮೇಲೆ ಸೀಟುಗಳನ್ನು ಹಂಚಿಕೆ ಮಾಡಿ ನಂತರ ಖಾಲಿ ಉಳಿಯುವ ಸೀಟುಗಳನ್ನು ಬಿ.ಎಸ್ಸಿ. ಪದವೀಧರರುಗಳಿಗೆ ಹಂಚಿಕೆ ಮಾಡುವುದು:

(2) ಎಐಸಿಟಿಇ ನಿಯಮಾವಳಿಯಂತೆ, ಬಿ.ಎಸ್ಸಿ. ಅಭ್ಯರ್ಥಿಗಳು ಬಿ.ಎಸ್ಸಿ. ಪದವಿಯಲ್ಲಿ ಕನಿಷ್ಠ ಶೇ 45ರಷ್ಟು ಅಂಕ (ಪ.ಜಾ/ಪ.ಪಂಗಡದ ಅಭ್ಯರ್ಥಿಗಳಿಗೆ ಶೇ. 40) ಪಡೆದಿರಬೇಕು ಮತ್ತು ದ್ವಿತೀಯ ಪಿ.ಯು.ಸಿ./12ನೇ ತರಗತಿಯನ್ನು ಗಣಿತ ವಿಷಯದೊಂದಿಗೆ ತೇರ್ಗಡೆ ಹೊಂದಿರಬೇಕು.

(3) ಬಿ.ಎಸ್ಸಿ. ಅಭ್ಯರ್ಥಿಗಳು ಎಲ್ಲಾ ಸೆಮಿಸ್ಟರ್/ವರ್ಷದಲ್ಲಿ ಪಡೆದ ಒಟ್ಟು ಅಂಕಗಳನ್ನು ಪರಿಗಣಿಸುವುದು ಮತ್ತು ಇವರಿಗೆ ಪ್ರತ್ಯೇಕ ಸಾಮಾನ್ಯ ಪ್ರವೇಶ ಪರೀಕ್ಷೆ ಇರುವುದಿಲ್ಲ.

(4) ಡಿಪ್ಲೋಮಾಧಾರಕರುಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಶೇ 20ರಷ್ಟು ಸೀಟುಗಳಲ್ಲಿ ಡಿಪ್ಲೋಮಾಧಾರಕರುಗಳಿಗೆ ಸೀಟು ಹಂಚಿಕೆಯಾದ ನಂತರ ಉಳಿಯುವ ಸೀಟುಗಳಿಗೆ ಮೆರಿಟ್ ಆಧಾರದ ಮೇಲೆ ಮತ್ತು ಮೀಸಲಾತಿ ನೀತಿಯನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಬಿ.ಎಸ್ಸಿ. ಅಭ್ಯರ್ಥಿಗಳಿಗೆ ಪ್ರವೇಶ ಕಲ್ಪಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

PR. 761
SC-100

ಸಹಕಾರ ಸಚಿವಾಲಯ

ವಿಷಯ : ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಕಾಕತಿ, ಬೆಳಗಾಂ ಜಿಲ್ಲೆ ಇದರ 2008-09 ರಿಂದ 2011-12ನೇ ಸಾಲಿನ ವಾರ್ಷಿಕ ಮಹಾಸಭೆಗಳನ್ನು ಮುಂದೂಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಇ 75 ಸಂಮಾಸ 2012, ದಿನಾಂಕ : 01-09-2012.
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ : ಡಿಎಸ್‌ಕೆ-ಇಎಸ್‌ಟಿಎಸ್-ಎಜಿಎಂ-364-2011-2012, ದಿನಾಂಕ : 31-01-2013.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಕಾಕತಿ, ಬೆಳಗಾಂ ಜಿಲ್ಲೆ ಇದರ 2008-09 ರಿಂದ 2011-12ರ ವಾರ್ಷಿಕ ಮಹಾಸಭೆಗಳನ್ನು ದಿನಾಂಕ : 31-03-2013 ರೊಳಗೆ ಜರುಗಿಸಲು ಆದೇಶಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ, ಕಾರ್ಖಾನೆಯ ದಿನಾಂಕ : 15-12-2012ರ ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ದಿನಾಂಕ: 31-03-2013ರ ಒಳಗೆ ನಡೆಸಬೇಕಾದ 2008-09 ರಿಂದ 2011-12ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ತೃಪ್ತಿಕರವಾಗಿಲ್ಲದೇ ಇರುವುದರಿಂದ ಮತ್ತು ಬರಗಾಲ ಪರಿಸ್ಥಿತಿ ಇರುವುದರಿಂದ ಹಾಗೂ ಸ್ಥಗಿತಗೊಂಡಿರುವ ಕಾರ್ಖಾನೆಯ ಕೆಲಸಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಬೇಕಾಗಿರುವುದರಿಂದ ಮತ್ತು ಕಾರ್ಖಾನೆಯ ವಾರ್ಷಿಕ ಮಹಾಸಭೆಯನ್ನು ದಿನಾಂಕ : 31-03-2013ರ ಒಳಗಾಗಿ ನಡೆಸಿದರೂ ಮತ್ತು 2012-13ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 30-09-2013ರ ಒಳಗಾಗಿ ನಡೆಸಬೇಕಾಗಿರುವುದರಿಂದ ಕಾರ್ಖಾನೆಯ ಹಿತದೃಷ್ಟಿಯಿಂದ ದಿನಾಂಕ : 30-09-2013ರ ಒಳಗಾಗಿ ನಡೆಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಿನಾಯ್ತಿ ಮತ್ತು ಆದೇಶವನ್ನು ನೀಡಬೇಕೆಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 04 ಸಸಕಾ 2013, ಬೆಂಗಳೂರು, ದಿನಾಂಕ : 14-05-2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿ ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಕಾಕತಿ, ಬೆಳಗಾಂ ಜಿಲ್ಲೆ ಇದರ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿಲ್ಲದ ಪ್ರಯುಕ್ತ ವಾರ್ಷಿಕ ಮಹಾಸಭೆಯನ್ನು ವರ್ಷದಲ್ಲಿ 2 ಸಾರಿ ಮಾಡುವುದರಿಂದ ಹೆಚ್ಚು ವೆಚ್ಚವಾಗುವ ಸಂಭವವಿರುವುದರಿಂದ, ದಿನಾಂಕ : 31–03–2013ರ ಒಳಗಾಗಿ ನಡೆಸಬೇಕಾದ 2008–09 ರಿಂದ 2011–12ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಮಹಾಸಭೆಯನ್ನು ದಿನಾಂಕ : 30–09–2013ರೊಳಗಾಗಿ ಜರುಗಿಸಲು ಪ್ರಕರಣ 27(1)ಕ್ಕೆ ವಿನಾಯಿತಿ ನೀಡಿ ಕಾಲಾವಕಾಶ ನೀಡಿದೆ.

ಸೂಚನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪ ಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30–09–2013ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಪ್ರಕರಣ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ.ಆರ್. ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ–3,

ಸಹಕಾರ ಇಲಾಖೆ.

PR. 762
SC-25

INFRASTRUCTURE DEVELOPMENT SECRETARIAT

Sub : Release of Karnataka Viability Gap Fund grant towards Improvements to State Highway (SH-10) from Maharashtra Border to Andhra Pradesh Border in Gulbarga District passing through Aland, Gulbarga, Malkhed, Sadem and Ribbanpally (Waghdari –Ribbanpally Road) - project to Escrow Account in State Bank of India, Chennai.

Read :

1. Proceedings of the 1st meeting of the State Level Single Window Agency for PPP projects held on 19.09.2007.
2. Proceedings of the 11th State High Level Clearance Committee held on 28.09.2007.
3. Minutes of the 12th meeting of the Empowered Institution, Dept of Economic Affairs, PPP Cell, Govt of India held on 05.03.2008.
4. Letter No. KRDCL/MD-DE4/VGF/2010-11/2466 dated 22.02.2011 from the Managing Director, KRDCL.
5. Letter No. ID 17 ITS 2009 dated 29.03.2011 from the Director, PPP Cell, Infrastructure Development Department.
6. Minutes of the 37th meeting of the Empowered Institution, Dept of Economic Affairs, PPP Cell, Govt of India held on 16.01.2012.
7. Tripartite Agreement executed between Empowered Institution, Concessionaire, State Bank of India (Lead Institution) and Principal Secretary to Govt, PWP & IWT Dept, GoK dated 19.03.2012.
8. PPP Cell, Department of Economic Affairs, Ministry of Finance, Govt of India order No. 3D(1)/33/2011-PPP dated 26.03.2012, 23.08.2012 and 22.10.2012.
9. Proceedings of the 12th meeting of the State Level Single Window Agency for PPP projects held on 06.03.2013.
10. Letter No. KRDCL/MD-EE-2/2012-13/3337 dated 08.03.2013 from the Managing Director, KRDCL.
11. Endorsement No. FD 510 Exp/1 2013 dated 15.05.2013.

Preamble:

In the proceedings read at (1) above, the committee recommended to consider the project- Improvements to State Highway (SH-10) from Maharashtra Border to Andhra Pradesh Border in Gulbarga District passing through Aland, Gulbarga, Malkhed, Sadem and Ribbanpally (Waghdari –Ribbanpally Road) under VGF with State Government support of 20% & 20% by Govt of India.

2. In the proceedings read at (2) above, the committee accorded approval to take forward the said project under PPP framework by entering into concession agreement with the developer selected through a transparent and competitive bidding process.

3. In the minutes read at (3) above, The Empowered Institution granted the in principle approval to the said project subject to the condition that the project being based on the Model concession agreement approved by the Competent Authority in the state Government and the Manual of Standards and Specifications published by Planning Commission, GoI.

4. In the letter read at (4) above, the Managing Director, KRDCL, had reported that selection of developer was completed by inviting tenders and M/s. GVRMP Waghdhari- Ribbanpally Tollway Pvt. Ltd was technically qualified and Letter of Acceptance was issued in favour of M/s. GVRMP Waghdhari- Ribbanpally Tollway Pvt. Ltd., for the total VGF Price bid amounting to Rs. 90.66 crores(38%). The Concession agreement was executed on 04.06.2010 between the Principal Secretary to Govt, PWP & IWT Dept, Managing Director, KRDCL and M/s. GVRMP Waghdhari- Ribbanpally Tollway Pvt. Ltd.

5. In the letter read at (5) above, the Director, PPP Cell, Infrastructure Development Department had reported to the Joint Director, PPP Cell, MoEF, Govt of India, about the various steps carried out to take forward the above said project and also requested for the final approval of Govt of India for VGF grants.

6. In the minutes read at (6) above, The Empowered Institution accorded final approval for TPC (Tendered Project cost) of Rs. 238.58 Crore, length of 135.85 Kms, GoI VGF of Rs. 47.71 crore and concession period of 30 years.

7. In the tripartite agreement executed between Empowered Institution, Concessionaire, State Bank of India (Lead Institution) and Principal Secretary to Govt, PWP & IWT Dept, GoK read at (7) above, the total VGF grant of Rs. 90.66 Crores, which includes State VGF Rs. 42.95 Crores shall be disbursed to the concessionaire by Lead Institution for and on behalf of the Empowered Institution.

8. In the orders read at (8) above, Govt of India has released Rs. 37.40 crore, Rs. 4.96 Crore and Rs. 4.00 crore vide orders dated 26.03.2012, 23.08.2012 and 22.10. 2012 respectively with a total amounting to Rs. 46.36 crores to Escrow Account in State Bank of India, Industrial Finance Branch, Chennai during construction period.

9. In the proceedings read at (9) above, approval was accorded to release of KVGF of Rs. 9.49 Crores subject to amendment of KVGF guidelines by the Cabinet regarding not entering one more Tripartite Agreement by the State Government.

10. In the letter read at (10) above, the Managing Director, KRDCL submitted the completion certificate and other concerned documents for release of KVGF grants of Rs. 9.49 Crores to Lead Financial Institution (SBI) for Operation & Maintenance Support during third concession period by State Govt.

11. In the endorsement read at (11) above, Finance Department, Govt of Karnataka has accorded approval to release Rs. 9.49 crores under the Head of Account 5465-01-190-1-20(P)-211 Investment during 2013-14 being the VGF as first tranche payment by GoK for the third year of the concession period towards Waghdhari Ribbanpalli 2 laning PPP project.

12. Hence the following order.

GOVERNMENT ORDER NO.ID 110 ITS 2012, BANGALORE, DATED :06.07.2013

Under the circumstances explained in the preamble, Government is pleased to accord sanction to release Rs.9,49,00,000/- (Rs Nine Crore Forty Nine Lakhs only) to Escrow Account, State Bank of India, Industrial Finance Branch, Chennai, towards Improvements to State Highway (SH-10) from Maharashtra Border to Andhra Pradesh Border in Gulbarga District passing through Aland, Gulbarga, Malkhed, Sadem and Ribbanpally (Waghdari –Ribbanpally Road)

2. This expenditure shall be met from the budget provision of Rs-3,500.00 Lakhs available under the Budget Head 5465-01-190-1-20-211 Karnataka Viability Gap Investment (Plan) 2013-14.

3. The Assistant General Manager, Industrial Finance Branch, State Bank of India, Chennai, is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzur Treasury, Bangalore and the Cheque/DD to be issued in favour of "Escrow Account Number 31740187961, State Bank of India, Industrial Finance Branch", Chennai.

4. This order is issued in accordance with the concurrence of Finance Department vide endorsement No. FD 510 Exp/1 2013 dated 15.05.2013.

By Order and in the name of the Governor of Karnataka,

M.Venkatesh Murthy,

Under Secretary to Government,

Infrastructure Development Department.

P.R. 763

ಇಂಧನ ಸಚಿವಾಲಯ

ವಿಷಯ : ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ಪುನರ್ ವಿಂಗಡಣೆ ಹಾಗೂ ಕಛೇರಿಗಳ ಪುನರ್‌ವ್ಯವಸ್ಥೆಯಡಿಯಲ್ಲಿ ತಾಂತ್ರಿಕ, ಲಿಪಿಕ ಮತ್ತು 'ಡಿ' ಸಮೂಹ ಹುದ್ದೆಗಳನ್ನು ಹಂಚಿಕೆಗೊಳಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 47 ಇಬಿಎಸ್ 2010 ದಿನಾಂಕ: 29.06.2012.

2. ಮುಖ್ಯ ವಿದ್ಯುತ್ ಪರಿವೀಕ್ಷಕರವರ ಪತ್ರ ಸಂಖ್ಯೆ: ಮು.ವಿ.ಪ/ ಸಿಸ–1/22774/ 13–14 ದಿನಾಂಕ: 11.10.2012.

3. ಮುಖ್ಯ ವಿದ್ಯುತ್ ಪರಿವೀಕ್ಷಕರವರ ಪತ್ರ ಸಂಖ್ಯೆ: ಮು.ವಿ.ಪ/ ಸಿಸ–1/43371/12–13 ದಿನಾಂಕ: 14.03.2013.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ 50 ತಾಂತ್ರಿಕ ಹುದ್ದೆಗಳನ್ನು ಹಾಗೂ 10 ತಾಂತ್ರಿಕೇತರ ಹುದ್ದೆಗಳನ್ನು ಸೃಜಿಸಿ ಆದೇಶ ಹೊರಡಿಸಲಾಗಿದೆ. ಈ ಆದೇಶದಲ್ಲಿ 5 ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, 8 ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, 4 ವಿದ್ಯುತ್ ಪರಿವೀಕ್ಷಕರು ಹಾಗೂ 33 ಸಹಾಯಕ ವಿದ್ಯುತ್ ಪರಿವೀಕ್ಷಕರು, ಹೀಗೆ 50 ತಾಂತ್ರಿಕ ಹುದ್ದೆಗಳನ್ನು ಸೃಜಿಸಿ ಆದೇಶ ಹೊರಡಿಸಲಾಯಿತು. ತಾಂತ್ರಿಕೇತರ ಹುದ್ದೆಗಳಲ್ಲಿ 1 ಮ್ಯಾನೇಜರ್ ಹುದ್ದೆ, 2 ಅಧೀಕ್ಷಕರ ಹುದ್ದೆ, 3 ಪ್ರಥಮ ದರ್ಜೆ ಸಹಾಯಕರು ಹಾಗೂ 4 ದ್ವಿತೀಯ ದರ್ಜೆ ಸಹಾಯಕರ ಹುದ್ದೆ, ಹೀಗೆ ಒಟ್ಟು 10 ಹುದ್ದೆಗಳನ್ನು ಸೃಜಿಸಲಾಯಿತು. ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಸೃಜಿಸಲಾದ ಹುದ್ದೆಗಳನ್ನು ಪುನರ್ ವಿಂಗಡಣೆಗೊಳಿಸಿ ಕಛೇರಿಗಳ ಪುನರ್ ವ್ಯವಸ್ಥೆಯಡಿಯಲ್ಲಿ ಹುದ್ದೆಗಳನ್ನು ಹಂಚಿಕೆಗೊಳಿಸಿ ಕಾರ್ಯಕಾರಿ ಆದೇಶವನ್ನು ಹೊರಡಿಸುವಂತೆ ಮುಖ್ಯ ವಿದ್ಯುತ್ ಪರಿವೀಕ್ಷಕರು ಕೋರಿರುತ್ತಾರೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರು ಒಟ್ಟು 442 ಹುದ್ದೆಗಳುಳ್ಳ (ತಾಂತ್ರಿಕ 193 ಮತ್ತು ತಾಂತ್ರಿಕೇತರ 249) 38 ಕಚೇರಿಗಳನ್ನೊಳಗೊಂಡ ಇಲಾಖಾ ಪುನರ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮುಖ್ಯ ವಿದ್ಯುತ್ ಪರಿವೀಕ್ಷಕರು ದಿನಾಂಕ: 14.03.2013 ರ ಪತ್ರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 151 ಇಬಿಎಸ್ 2012 ಬೆಂಗಳೂರು, ದಿನಾಂಕ: 21.06.2013.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ ಹೊಸದಾಗಿ 50 ತಾಂತ್ರಿಕ ಹುದ್ದೆಗಳು ಹಾಗೂ 10 ತಾಂತ್ರಿಕೇತರ ಹುದ್ದೆಗಳನ್ನು ಸೃಜಿಸಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಕಛೇರಿ ಕೆಲಸಗಳಿಗೆ ಅನುಗುಣವಾಗಿ ಇಲಾಖೆಯನ್ನು ಪುನರ್ ವಿಂಗಡಣೆಗೊಳಿಸಿ ಕಛೇರಿಗಳ ಪುನರ್ ವ್ಯವಸ್ಥೆಯಡಿಯಲ್ಲಿ ಹುದ್ದೆಗಳನ್ನು ಹಂಚಿಕೆಗೊಳಿಸಿ ಈ ಕೆಳಕಂಡ ಅನುಬಂಧಗಳಲ್ಲಿ ವಿವರಣೆಗಳನ್ನು ನಮೂದಿಸಿ ಆದೇಶಿಸಲಾಗಿದೆ.

(1) ಅನುಬಂಧ–1 – ಪುನರ್ ವ್ಯವಸ್ಥೆಯ ನಂತರ ಕಾರ್ಯನಿರ್ವಹಿಸುವ ಕಚೇರಿಗಳ ವಿವರ ಮತ್ತು ಅವುಗಳ ಕಾರ್ಯಸ್ಥಾನ.

(2) ಅನುಬಂಧ–2 – ಪುನರ್ ವಿಂಗಡಣೆ ನಂತರ ಚಾಲ್ತಿಗೆ ಬರಬೇಕಾದ ಕಚೇರಿವಾರು ಕಚೇರಿಯ ಮುಖ್ಯಾಧಿಕಾರಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರಗಳು.

(3) ಅನುಬಂಧ–3 – ಪುನರ್ ವ್ಯವಸ್ಥೆಯ ನಂತರ ಚಾಲ್ತಿಗೆ ಬರಬೇಕಾದ ಕಚೇರಿಗಳ ವಿವರ

(4) ಅನುಬಂಧ–4 – ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕರ ವ್ಯಾಪ್ತಿಯ ಕಚೇರಿಗಳು

(5) ಅನುಬಂಧ–5 – ಪುನರ್ ವಿಂಗಡಣೆ ನಂತರ ಚಾಲ್ತಿಗೆ ಬರಬೇಕಾದ ವಿದ್ಯುತ್ ಪರಿವೀಕ್ಷಣಾಲಯದ ಪರಿವೀಕ್ಷಣಾಧಿಕಾರಿಗಳ ಕಾರ್ಯ ವ್ಯಾಪ್ತಿಗಳ ವಿವರ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಮೀರ್ ಮಡಿಮನ್

ಪೀಠಾಧಿಕಾರಿ,

ಇಂಧನ ಇಲಾಖೆ.

ಅನುಬಂಧ–1

ಸರ್ಕಾರಿ ಆದೇಶ ಸಂಖ್ಯೆ ಇಎನ್ 151 ಇಬಿಎಸ್ 2012 ದಿನಾಂಕ: 21/06/2013

ಪುನರ್ ವ್ಯವಸ್ಥೆಯ ನಂತರ ಕಾರ್ಯ ನಿರ್ವಹಿಸುವ ಕಛೇರಿಗಳ ವಿವರ ಮತ್ತು ಅವುಗಳ ಕಾರ್ಯ ಸ್ಥಾನ

ಕ್ರ.ಸಂ	ಕಛೇರಿಯ ಹೆಸರು	ಕಾರ್ಯ ಸ್ಥಾನ
1	ಮುಖ್ಯ ವಿದ್ಯುತ್ ಪರಿವೀಕ್ಷಕರು, ಕೇಂದ್ರ ಕಚೇರಿ, ಬೆಂಗಳೂರು	ಬೆಂಗಳೂರು
2	ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ	ಬೆಂಗಳೂರು
3	ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ	ಬೆಂಗಳೂರು
4	ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು	ಮೈಸೂರು
5	ಹೆಚ್ಚುವರಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಧಾರವಾಡ	ಧಾರವಾಡ
6	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ	ಬೆಂಗಳೂರು
7	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ	ಬೆಂಗಳೂರು

ಕ್ರ.ಸಂ	ಕಛೇರಿಯ ಹೆಸರು	ಕಾರ್ಯ ಸ್ಥಾನ
8	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ	ಬೆಂಗಳೂರು
9	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ	ಚಿತ್ರದುರ್ಗ
10	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂ ಹೆಚ್ಚುವರಿ ದಕ್ಷಿಣ	ಬೆಂಗಳೂರು
11	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ	ಬೆಂಗಳೂರು
12	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪಶ್ಚಿಮ	ಬೆಂಗಳೂರು
13	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮಂಗಳೂರು	ಮಂಗಳೂರು
14	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಳಗಾಂ	ಬೆಳಗಾಂ
15	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಗುಲ್ಬರ್ಗಾ	ಗುಲ್ಬರ್ಗಾ
16	ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬಳ್ಳಾರಿ	ಬಳ್ಳಾರಿ
17	ವಿದ್ಯುತ್ ಪರಿವೀಕ್ಷಕರು, ದಾವಣಗೆರೆ	ದಾವಣಗೆರೆ
18	ವಿದ್ಯುತ್ ಪರಿವೀಕ್ಷಕರು, ಬೆಂ. ದಕ್ಷಿಣ	ಬೆಂ. ದಕ್ಷಿಣ
19	ವಿದ್ಯುತ್ ಪರಿವೀಕ್ಷಕರು, ಹಾಸನ	ಹಾಸನ
20	ವಿದ್ಯುತ್ ಪರಿವೀಕ್ಷಕರು, ಉಡುಪಿ	ಉಡುಪಿ
21	ವಿದ್ಯುತ್ ಪರಿವೀಕ್ಷಕರು, ಶಿವಮೊಗ್ಗ	ಶಿವಮೊಗ್ಗ
22	ವಿದ್ಯುತ್ ಪರಿವೀಕ್ಷಕರು, ಶಿರಸಿ	ಶಿರಸಿ
23	ವಿದ್ಯುತ್ ಪರಿವೀಕ್ಷಕರು, ಬಿಜಾಪುರ	ಬಿಜಾಪುರ
24	ವಿದ್ಯುತ್ ಪರಿವೀಕ್ಷಕರು, ರಾಯಚೂರು	ರಾಯಚೂರು
25	ಉಪ ವಿದ್ಯುತ್ ಪರಿವೀಕ್ಷಕರು, ಕೋಲಾರ	ಕೋಲಾರ
26	ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
27	ಉಪ ವಿದ್ಯುತ್ ಪರಿವೀಕ್ಷಕರು, ತುಮಕೂರು	ತುಮಕೂರು
28	ಉಪ ವಿದ್ಯುತ್ ಪರಿವೀಕ್ಷಕರು, ರಾಮನಗರ	ರಾಮನಗರ
29	ಉಪ ವಿದ್ಯುತ್ ಪರಿವೀಕ್ಷಕರು, ಮಂಡ್ಯ	ಮಂಡ್ಯ
30	ಉಪ ವಿದ್ಯುತ್ ಪರಿವೀಕ್ಷಕರು, ಚಾಮರಾಜನಗರ	ಚಾಮರಾಜನಗರ
31	ಉಪ ವಿದ್ಯುತ್ ಪರಿವೀಕ್ಷಕರು, ಮಡಿಕೇರಿ	ಮಡಿಕೇರಿ
32	ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಮಗಳೂರು	ಚಿಕ್ಕಮಗಳೂರು
33	ಉಪ ವಿದ್ಯುತ್ ಪರಿವೀಕ್ಷಕರು, ಗದಗ	ಗದಗ
34	ಉಪ ವಿದ್ಯುತ್ ಪರಿವೀಕ್ಷಕರು, ಹಾವೇರಿ	ಹಾವೇರಿ
35	ಉಪ ವಿದ್ಯುತ್ ಪರಿವೀಕ್ಷಕರು, ಬಾಗಲಕೋಟೆ	ಬಾಗಲಕೋಟೆ
36	ಉಪ ವಿದ್ಯುತ್ ಪರಿವೀಕ್ಷಕರು, ಬೀದರ್	ಬೀದರ್
37	ಉಪ ವಿದ್ಯುತ್ ಪರಿವೀಕ್ಷಕರು, ಯಾದಗಿರಿ	ಯಾದಗಿರಿ
38	ಉಪ ವಿದ್ಯುತ್ ಪರಿವೀಕ್ಷಕರು, ಕೊಪ್ಪಳ	ಕೊಪ್ಪಳ

ಅನುಬಂಧ–2

ಸರ್ಕಾರಿ ಆದೇಶ ಸಂ. ಇಎನ್ 151 ಇಬಿಎಸ್ 2012 ದಿನಾಂಕ: 21.06.2013

ವಿದ್ಯುತ್ ಪರಿವೀಕ್ಷಣಾಲಯ ಇಲಾಖಾ ಕಚೇರಿಗಳನ್ನು ಪುನರ್ ವಿಂಗಡನೆ ನಂತರ ಚಾಲ್ತಿಗೆ ಬರಬೇಕಾದ ಕಛೇರಿವಾರು, ಕಛೇರಿಯ ಮುಖ್ಯಾಧಿಕಾರಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರಗಳು

ಕ್ರ.ಸಂ.	ಸ್ಥಳ	ಕಚೇರಿಗಳ ಸಂಖ್ಯೆ	ಕಚೇರಿಯ ಮುಖ್ಯಾಧಿಕಾರಿಗಳು	ಕಚೇರಿ	ಮುವಿಪ	ಹೆಮುವಿಪ	ಉಮುವಿಪ	ವಿಪ	ಉವಿಪ	ಸವಿಪ(ಕಚೇರಿ)	ಸವಿಪ (ಕ್ಷೇತ್ರ)	ಹಿರಿಯ ಲೆಕ್ಕಾಧಿಕಾರಿ	ಲೆಕ್ಕಾಧಿಕಾರಿ	ಲೀಗಲ್ ಆಫೀಸರ್	ವ್ಯವಸ್ಥಾಪಕರು	ಅಧೀಕ್ಷಕರು	ಪ್ರ.ದ.ಸ	ಶೀಘ್ರಲಿಪಿಗಾರರು	ದ್ವಿ.ದ.ಸ	ಬೆರಳಚ್ಚುಗಾರರು	ಕಂಪ್ಯೂಟರ್ ಆಪರೇಟರ್	ಹಿರಿಯ ಚಾಲಕರು	ಚಾಲಕರು	ದಫೇದಾರರು	ಸಹಾಯಕರು	ಜವಾನರು	ರಾತ್ರಿ ಕಾವಲುಗಾರರು	ಡಿ.ಎಂ.ಟಿ	ಒಟ್ಟು
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26	27	28	29	30
1	ಬೆಂಗಳೂರು	1	ಮುವಿಪ	ಕೇಂದ್ರ ಕಚೇರಿ	1	1	0	3	1	5	0	1	1	1	2	2	10	2	12	2	3	0	1	2	2	4	1	1	58
	ಒಟ್ಟು ಕಚೇರಿ	1																											0
2	ಬೆಂಗಳೂರು	1	ಹೆಮುವಿಪ	ಬೆಂ ಉತ್ತರ	0	1	1	1	1	2	3	0	1	0	1	2	2	1	2	0	0	1	0	0	1	1	0	0	21
3	ಬೆಂಗಳೂರು	1	ಹೆಮುವಿಪ	ಬೆಂ ದಕ್ಷಿಣ	0	1	1	0	0	2	0	0	1	0	1	2	2	1	2	0	0	0	1	0	1	1	0	0	16
4	ಮೈಸೂರು	1	ಹೆಮುವಿಪ	ಮೈಸೂರು	0	1	1	2	2	2	4	0	0	0	2	2	2	1	3	0	0	0	1	0	1	1	0	0	25
5	ಧಾರವಾಡ	1	ಹೆಮುವಿಪ	ಧಾರವಾಡ	0	1	1	1	1	2	2	0	0	0	2	2	2	1	3	0	0	0	1	0	1	1	0	0	21
	ಒಟ್ಟು ಹೆಮು ವಿಪ ಕಛೇರಿ ಗಳು	4																											
6	ಬೆಂಗಳೂರು	1	ಉಮುವಿಪ	ಬೆಂ ಪಶ್ಚಿಮ ಉತ್ತರ	0	0	1	1	1	1	3	0	0	0	0	1	1	0	2	0	1	0	1	0	1	1	0	0	15

ಕ್ರ.ಸಂ.	ಸ್ಥಳ	ಕಚೇರಿಗಳ ಸಂಖ್ಯೆ	ಕಚೇರಿಯ ಮುಖ್ಯಾಧಿಕಾರಿಗಳ	ಕಚೇರಿ	ಮುಇಅ	ಹೆಮುಇಅ	ಉಮುಇಅ	ಇಅ	ಉಇಅ	ಸಇಅ(ಕಚೇರಿ)	ಸಇಅ (ಕ್ಷೇತ್ರೀಯ)	ಹಿರಿಯ ಲೆಕ್ಕಾಧಿಕಾರಿ	ಲೆಕ್ಕಾಧಿಕಾರಿ	ಲೀಗಲ್ ಆಫೀಸರ್	ವ್ಯವಸ್ಥಾಪಕರು	ಅಧೀಕ್ಷಕರು	ಪ್ರದ.ಸ	ಶೀಘ್ರಲಿಪಿಗಾರರು	ದ್ವಿದ.ಸ	ಬೆರಳಚ್ಚುಗಾರರು	ಕಂಪ್ಯೂಟರ್ ಆಪರೇಟರ್	ಹಿರಿಯ ಚಾಲಕರು	ಚಾಲಕರು	ದಫೇದಾರರು	ಸಹಾಯಕರು	ಜವಾನರು	ರಾತ್ರಿ ಕಾವಲುಗಾರರು	ಡಿ.ಎಂ.ಓ	ಒಟ್ಟು
7	ಬೆಂಗಳೂರು	1	ಉಮುಇಅ	ಬೆಂ ಮಧ್ಯ	**0**	**0**	**1**	**1**	**1**	**1**	**3**	**0**	0	0	0	1	1	0	2	0	1	0	1	0	1	1	0	0	**15**
8	ಬೆಂಗಳೂರು	1	ಉಮುಇಅ	ಬೆಂ ಹೆಚ್ಚುವರಿ ಮಧ್ಯ	**0**	**0**	**1**	**1**	**1**	**1**	**3**	**0**	0	0	0	1	1	0	2	0	1	0	0	0	1	1	0	0	**14**
9	ಚಿತ್ರದುರ್ಗ	1	ಉಮುಇಅ	ಚಿತ್ರದುರ್ಗ	**0**	**0**	**1**	**0**	**1**	**1**	**2**	**0**	0	0	0	1	1	0	1	0	1	0	0	0	1	1	0	0	**11**
10	ಬೆಂಗಳೂರು	1	ಉಮುಇಅ	ಬೆಂ ಹೆಚ್ಚುವರಿ ದಕ್ಷಿಣ	**0**	**0**	**1**	**1**	**1**	**1**	**3**	**0**	0	0	0	1	1	0	2	0	1	0	0	0	1	1	0	0	**14**
11	ಬೆಂಗಳೂರು	1	ಉಮುಇಅ	ಬೆಂ ಪಶ್ಚಿಮ	**0**	**0**	**1**	**1**	**1**	**1**	**2**	**0**	0	0	0	1	1	0	2	0	1	0	0	0	1	1	0	0	**13**
12	ಬೆಂಗಳೂರು	1	ಉಮುಇಅ	ಬೆಂ ಹೆಚ್ಚುವರಿ ಪಶ್ಚಿಮ	0	0	1	1	1	1	2	0	0	0	0	1	1	0	2	0	1	0	1	0	1	1	0	0	**14**
13	ಮಂಗಳೂರು	1	ಉಮುಇಅ	ಮಂಗಳೂರು	0	0	1	1	2	1	4	0	0	0	0	1	1	0	1	0	1	0	0	0	1	1	0	0	**15**
14	ಬೆಳಗಾಂ	1	ಉಮುಇಅ	ಬೆಳಗಾಂ	0	0	1	1	2	1	4	0	0	0	0	1	1	0	1	0	1	0	0	0	1	1	0	0	**15**

ಕ್ರ.ಸಂ.	ಸ್ಥಳ	ಕಚೇರಿಗಳ ಸಂಖ್ಯೆ	ಕಚೇರಿಯ ಮುಖ್ಯಾಧಿಕಾರಿಗಳ	ಕಚೇರಿ	ಮುಇಜ	ಅಮುಇಜ	ಉಮುಇಜ	ಇಜ	ಉಇಜ	ಸಇಜ(ಕಚೇರಿ)	ಸಇಜ (ಕ್ಷೇತ್ರೀಯ)	ಹಿರಿಯ ಲೆಕ್ಕಾಧಿಕಾರಿ	ಲೆಕ್ಕಾಧಿಕಾರಿ	ಲೀಗಲ್ ಆಫೀಸರ್	ವ್ಯವಸ್ಥಾಪಕರು	ಅಧೀಕ್ಷಕರು	ಪ್ರ.ದ.ಸ	ಶೀಘ್ರಲಿಪಿಗಾರರು	ದ್ವಿ.ದ.ಸ	ಬೆರಳಚ್ಚುಗಾರರು	ಕಂಪ್ಯೂಟರ್ ಆಪರೇಟರ್	ಹಿರಿಯ ಚಾಲಕರು	ಚಾಲಕರು	ದಫೇದಾರರು	ಸಹಾಯಕರು	ಜವಾನರು	ರಾತ್ರಿ ಕಾವಲುಗಾರರು	ಡಿ.ಎಂ.ಓ	ಒಟ್ಟು
15	ಗುಲ್ಬರ್ಗ	1	ಉಮುಇಜ	ಗುಲ್ಬರ್ಗ	0	0	1	1	1	1	2	0	0	0	0	1	1	0	1	0	1	1	0	0	0	1	0	0	**12**
16	ಬಳ್ಳಾರಿ	1	ಉಮುಇಜ	ಬಳ್ಳಾರಿ	0	0	1	1	1	1	2	0	0	0	0	1	1	0	1	0	1	0	1	0	1	1	0	0	**13**
	ಒಟ್ಟು ಉಮುಇಜ ಕಚೇರಿಗಳು	**11**																											
17	ದಾವಣಗೆರೆ	1	ಇಜ	ದಾವಣಗೆರೆ	0	0	0	1	1	1	1	0	0	0	0	0	1	0	1	0	0	0	0	0	1	1	0	0	**8**
18	ಬೆಂಗಳೂರು	1	ಇಜ	ಬೆಂ. ದಕ್ಷಿಣ	0	0	0	1	2	1	6	0	0	0	0	0	1	0	1	0	0	0	0	0	0	1	0	0	**13**
19	ಹಾಸನ	1	ಇಜ	ಹಾಸನ	0	0	0	1	1	1	2	0	0	0	0	0	1	0	1	0	0	0	0	0	0	1	0	0	**8**
20	ಉಡುಪಿ	1	ಇಜ	ಉಡುಪಿ	0	0	0	1	1	1	1	0	0	0	0	0	1	0	1	0	0	0	0	0	0	1	0	0	**7**
21	ಶಿವಮೊಗ್ಗ	1	ಇಜ	ಶಿವಮೊಗ್ಗ	0	0	0	1	1	1	2	0	0	0	0	0	1	0	1	0	0	0	1	0	1	1	0	0	**10**
22	ಶಿರಸಿ	1	ಇಜ	ಶಿರಸಿ	0	0	0	1	1	1	1	0	0	0	0	0	1	0	1	0	0	0	0	0	1	1	0	0	**8**

ಕ್ರ.ಸಂ.	ಸ್ಥಳ	ಕಚೇರಿಗಳ ಸಂಖ್ಯೆ	ಕಛೇರಿಯ ಮುಖ್ಯಾಧಿಕಾರಿಗಳ	ಕಛೇರಿ	ಮುವಿಪ	ಹೆಮುವಿಪ	ಉಮುವಿಪ	ವಿಪ	ಉವಿಪ	ಸವಿಪ(ಕಚೇರಿ)	ಸವಿಪ (ಕ್ಷೇತ್ರೀಯ)	ಹಿರಿಯ ಲೆಕ್ಕಾಧಿಕಾರಿ	ಲೆಕ್ಕಾಧಿಕಾರಿ	ಲೀಗಲ್ ಆಫಿಸರ್	ವ್ಯವಸ್ಥಾಪಕರು	ಅಧೀಕ್ಷಕರು	ಪ್ರ.ದ.ಸ	ಶೀಘ್ರಲಿಪಿಗಾರರು	ದ್ವಿ.ದ.ಸ	ಬೆರಳಚ್ಚುಗಾರರು	ಕಂಪ್ಯೂಟರ್ ಆಪರೇಟರ್	ಹಿರಿಯ ಚಾಲಕರು	ಚಾಲಕರು	ದಫೇದಾರರು	ಸಹಾಯಕರು	ಜವಾನರು	ರಾತ್ರಿ ಕಾವಲುಗಾರರು	ಡಿ.ಎಂ.ಓ	ಒಟ್ಟು
23	ಬಿಜಾಪುರ	1	ವಿಪ	ಬಿಜಾಪುರ	0	0	0	1	1	1	1	0	0	0	0	0	1	0	1	0	0	0	0	0	1	1	0	0	**8**
24	ರಾಯಚೂರು	1	ವಿಪ	ರಾಯಚೂರು	0	0	0	1	1	1	1	0	0	0	0	0	1	0	1	0	0	0	0	0	1	1	0	0	**8**
	ಒಟ್ಟು ವಿಪ ಕಛೇರಿಗಳು	**8**																											
25	ಕೋಲಾರ	1	ಉವಿಪ	ಕೋಲಾರ	0	0	0	0	1	0	2	0	0	0	0	0	1	0	1	0	0	0	0	0	1	1	0	0	**7**
26	ಚಿಕ್ಕಬಳ್ಳಾಪುರ	1	ಉವಿಪ	ಚಿಕ್ಕಬಳ್ಳಾಪುರ	0	0	0	0	1	0	1	0	0	0	0	0	1	0	1	0	0	0	0	0	1	0	0	0	**5**
27	ತುಮಕೂರು	1	ಉವಿಪ	ತುಮಕೂರು	0	0	0	0	1	0	3	0	0	0	0	0	1	0	1	0	0	0	0	0	1	1	0	0	**8**
28	ರಾಮನಗರ	1	ಉವಿಪ	ರಾಮನಗರ	0	0	0	0	1	0	1	0	0	0	0	0	1	0	1	1	0	0	0	0	0	1	0	0	**6**
29	ಮಂಡ್ಯ	1	ಉವಿಪ	ಮಂಡ್ಯ	0	0	0	0	1	0	2	0	0	0	0	0	1	0	1	0	0	0	0	0	1	1	0	0	**7**
30	ಚಾಮರಾಜನಗರ	1	ಉವಿಪ	ಚಾಮರಾಜನಗರ	0	0	0	0	1	0	1	0	0	0	0	0	1	0	1	0	0	0	0	0	0	1	0	0	**5**

ಕ್ರ.ಸಂ.	ಸ್ಥಳ	ಕಚೇರಿಗಳ ಸಂಖ್ಯೆ	ಕಚೇರಿಯ ಮುಖ್ಯಾಧಿಕಾರಿಗಳ	ಕಚೇರಿ	ಮುಅ	ಹಿಮುಅ	ಕಾಮುಅ	ಅ	ಕಾಅ	ಸಅ(ಕಚೇರಿ)	ಸಅ (ಕ್ಷೇತ್ರ)	ಹಿರಿಯ ಲೆಕ್ಕಾಧಿಕಾರಿ	ಲೆಕ್ಕಾಧಿಕಾರಿ	ಲೀಗಲ್ ಆಫೀಸರ್	ವ್ಯವಸ್ಥಾಪಕರು	ಅಧೀಕ್ಷಕರು	ಪ್ರ.ದ.ಸ	ಶೀಘ್ರಲಿಪಿಗಾರರು	ದ್ವಿ.ದ.ಸ	ಬೆರಳಚ್ಚುಗಾರರು	ಕಂಪ್ಯೂಟರ್ ಆಪರೇಟರ್	ಹಿರಿಯ ಚಾಲಕರು	ಚಾಲಕರು	ದಫೇದಾರರು	ಸಹಾಯಕರು	ಜವಾನರು	ರಾತ್ರಿ ಕಾವಲುಗಾರರು	ಡಿ.ಎಂ.ಓ	ಒಟ್ಟು
31	ಮಡಿಕೇರಿ	1	ಕಾಅ	ಮಡಿಕೇರಿ	0	0	0	0	1	0	1	0	0	0	0	0	1	0	1	0	0	0	0	0	0	1	0	0	**5**
32	ಚಿಕ್ಕಮಗಳೂರು	1	ಕಾಅ	ಚಿಕ್ಕಮಗಳೂರು	0	0	0	0	1	0	2	0	0	0	0	0	1	0	1	0	0	0	0	0	0	1	0	0	**6**
33	ಗದಗ	1	ಕಾಅ	ಗದಗ	0	0	0	0	1	0	1	0	0	0	0	0	1	0	1	0	0	0	0	0	0	1	0	0	**5**
34	ಹಾವೇರಿ	1	ಕಾಅ	ಹಾವೇರಿ	0	0	0	0	1	0	1	0	0	0	0	0	1	0	1	0	0	0	0	0	0	1	0	0	**5**
35	ಬಾಗಲಕೋಟೆ	1	ಕಾಅ	ಬಾಗಲಕೋಟೆ	0	0	0	0	1	0	2	0	0	0	0	0	1	0	1	0	0	0	0	0	0	1	0	0	**6**
36	ಕೊಪ್ಪಳ	1	ಕಾಅ	ಕೊಪ್ಪಳ	0	0	0	0	1	0	1	0	0	0	0	0	1	0	1	0	0	0	0	0	0	1	0	0	**5**
